ಶ್ರೀ ಜೆ. ಎ. ಫರ್ನಾಂಡೀಸ್ (ಅಧ್ಯಕ್ಷರು ಅಗದಪತ್ರಗಳ ಸಮಿತಿ) —ಮಾನ್ಯ ಅಧ್ಯಕ್ಷರೇ, ನಾನು ಸಭೆಯ ಮುಂದಿಡಲಾದ ಕಾಗದಪತ್ರಗಳ ಸಮಿತಿಯ ಮೊದಲನೇ ವರದಿಯ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಸಮಿತಿಯ ಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷರು.—ಉಪಾಧ್ಯಕ್ಷರ ಸ್ಥಾನಕ್ಕೆ ಮೂವರು ಹೆಸರುಗಳನ್ನು ಸೂಚಿಸಿರತಕ್ಕ ೪ ಪ್ರಸ್ತಾವನೆಗಳು ಬಂದಿವೆ. ಕಾರ್ಯಕ್ರಮದ ಪಟ್ಟಿಯಲ್ಲಿರುವ ಕ್ರಮದಲ್ಲಿಯೇ ಅವರವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹಾಗೂ ಅನುಮೋದಕರ ಹೆಸರುಗಳನ್ನು ಕರೆಯುತ್ತೇನೆ. ಎಲ್ಲಾ ಪ್ರಸ್ತಾವಗಳನ್ನು ಸೂಚಿಸಿ ಅವುಗಳನ್ನು ಅನುಮೋದಿಸಿದನಂತರ ಯಾವ ಕ್ರಮದಲ್ಲಿ ಸೂಚಿಸಲಾಗಿದೆಯೋ ಅದೇ ಕ್ರಮದಲ್ಲಿ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವ ಅಂಗೀಕೃತವಾದಲ್ಲಿ ಇತರ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕಂವುದಿಲ್ಲ.

ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಪ್ರಸ್ತಾವವನ್ನು ಸೂಚಿಸಿ ಮಾನ್ಯ ಬಂದರು ಹಾಗೂ ಮೀನುಗಾರಿಕೆ ಸಚಿವರು ಅದನ್ನು ಅನುಮೋದಿಸಂವುದು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, "ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಶ್ರೀ ಬಿ ಆರ್. ಯಾವಗಲ್ ಅವರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ."

ಶ್ರೀ ಎಂ, ರಘುಪತಿ (ಬಂದರು ಹಾಗೂ ಮೀನುಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಆ ಸೂಚನೆಯನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಮಂಡಿಸಲಾಯಿತು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಶ್ರೀ ಬಿ. ಆರ್. ಯಾವಗಲ್ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ನಾನು ಈ ಸೂಚನೆಯನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಮಂಡಿಸಲಾಯಿತು

ಶ್ರೀ ಸಾಲೇರ್ ಎಸ್. ಸಿದ್ದಪ್ಪ —ನಾನು ಶ್ರೀ ಧರ್ಮಪ್ಪನವರ ಹೆಸರನ್ನು ಸೂಚಿಸಿ ಕಳಿಸಿರತಕ್ಕ ಪ್ರಸ್ತಾವ ಸೂಚನೆ ಮಾಡಂವುದಿಲ್ಲ.

ಶ್ರೀ ಎಸ್. ಮುನಿಸ್ವಾಮಪ್ಪ.—ನಾನು ಕೂಡ ಕಳಿಸಿರತಕ್ಕ ಪ್ರಸ್ತಾವವನ್ನು ಸೂಚನೆ ಮಾಡುವುದಿಲ್ಲ.

ಅಧ್ಯಕ್ಷರು.—ಇವೆರಡೂ ಸದಸ್ಯರ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಯಿತು. ಈಗ ಮೊದಲನೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ :—"ಶ್ರೀ ಬಿ. ಆರ್. ಯಾವಗಲ್ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು."

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕೃತವಾಯಿತು

ಶ್ರೀ ಬಿ. ಆರ್. ಯಾವಗಲ್‌ರವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾದವರು

ಅಧ್ಯಕ್ಷರು.—ಮಾನ್ಯ ಶ್ರೀ ಎ. ಲಕ್ಷ್ಮೀಸಾಗರ್‌ರವರು ಹಾಗೂ ಶ್ರೀ ಎಂ ರಘುಪತಿಯವರು ಮಾನ್ಯ ಶ್ರೀ ಬಿ. ಆರ್. ಯಾವಗಲ್‌ರವರನ್ನು ಉಪಾಧ್ಯಕ್ಷರ ಪೀಠಕ್ಕೆ ಕರೆತರಬೇಕು.

(ಮಾನ್ಯ ಶ್ರೀ ಎ. ಲಕ್ಷ್ಮೀಸಾಗರ್‌ರವರು ಹಾಗೂ ಶ್ರೀ ಎಂ. ರಘುಪಯತಿವರು ಮಾನ್ಯ ಶ್ರೀ ಬಿ. ಆರ್. ಯಾವಗಲ್‌ರವರನ್ನು ಉಪಾಧ್ಯಕ್ಷರ ಪೀಠಕ್ಕೆ ಕರೆತಂದರು.)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಾವಗಲ್‌ರವರು ಸರ್ವಾನುಮತದಿಂದ ಈ ಮಾನ್ಯ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಕೇವಲ ನಮ್ಮ ಪಕ್ಷದ ಮತದಿಯಿಂದ ಅಷ್ಟೇ ಅಲ್ಲದೆ ಈ ಮನೆಯ ಎಲ್ಲಾ ಸದಸ್ಯರ ಮತದಿಯಿಂದ ಹಾಗೂ ನನ್ನ ವೈಯಕ್ತಿಕ ಮತದಿಯಿಂದ ನಾನು ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ಅವರು ತಮ್ಮ ಕೆಲಸವನ್ನು ಯಶಸ್ವಿಯಾಗಿ ಮತ್ತು ಸಮರ್ಪಕವಾಗಿ ನಡೆಸಲಿ ಎಂದು ನಾನು ಹಾರೈಸುತ್ತೇನೆ. ಉಪಾಧ್ಯಕ್ಷರ ಚುನಾವಣೆಗೆ ಸ್ವಲ್ಪ ವಿಳಂಬವಾದುದು ನಿಜ. ನಾವು ಹಿಂದಿನ ಸಭೆಯಲ್ಲಿ ಉಪಾಧ್ಯಕ್ಷರ ಚುನಾವಣೆ ಮಾಡಬೇಕೆಂದು ಯೋಚನೆ ಮಾಡಿದ್ದೆವು. ಆದರೆ ಒಂದೇ ದಿವಸ ಸಭೆ ಆಗಿದ್ದರಿಂದ ಮತ್ತು ಇದರ ಹೊರತು ಬೇರೆ ಯಾವುದೇ ರೀತಿಯ ಕಾರ್ಯಕ್ರಮ ಇರದೇ ಇದ್ದುದರಿಂದ ಈ ಒಂದು ಚುನಾವಣೆಯನ್ನು ಮುಂದಕ್ಕೆ ಹಾಕಬೇಕಾಗಿ ಬಂತು. ಈಗ ಆ ಚುನಾವಣೆಯನ್ನು ನಡೆಸಿದ್ದೇವೆ ಮಾನ್ಯ ಖಾರ್ಗೆಯವರು ಹೇಳಿದರು ನಿಮ್ಮ ಪಕ್ಷದ ಕಡೆಗೆ ಬರುತ್ತಿದ್ದಾರೆಂದು. ಇದರಿಂದ ಅವರಿಗೆ ಬಹಳ ಸಂತೋಷವಾಗಿದೆ, ಅವರಿಗೆ ಸಂತೋಷವಾಗಿರುವುದರಿಂದ ನನಗೂ ಕೂಡ ಬಹಳ ಸಂತೋಷವಾಗಿದೆ. ಆದರೆ ಉಪಾಧ್ಯಕ್ಷರನ್ನು ಈ ಕಡೆಯಿಂದ ನಿಮ್ಮ ಕಡೆ ಕಳುಹಿಸಿರುವುದಂ ನಿಮ್ಮ ಕಾರ್ಯಕಲಾಪಗಳಲ್ಲಿ ಪ್ರೇರಣೆ ಮತ್ತು ಒಳ್ಳೆಯ ಸದುದ್ದೇಶದಿಂದ ಹಾರೈಕೆ ಕೊಡಲು ನಾವು ಕಳುಹಿಸಿದ್ದೇವೆ. ನನಗೆ ತಿಳಿದಮಟ್ಟಿಗೆ ಯಾವಾಗಲೂ ಉಪಾಧ್ಯಕ್ಷರ ಸ್ಥಾನ ವಿರೋಧ ಪಕ್ಷದ ಧುರೀಣರ ಪಕ್ಕದಲ್ಲೇ. ಅಪರಿಬ್ಬರಲ್ಲಿ ಆಗಾಗ ಮಾತುಕತೆ ಆಗಲೀ ಅಥವಾ ಏನಾದರೂ ಉದ್ವೇಗದ ಪರಿಸ್ಥಿತಿ ಬಂದರೆ ಸ್ವಲ್ಪ ಮಟ್ಟಿಗೆ ಶಾಂತ ಪರಿಸ್ಥಿತಿಯನ್ನು ಉಂಟು ಮಾಡಲು ಅವರಿಗೆ ಆ ಜಾಗವನ್ನು ಕೊಟ್ಟಿರುವುದು ಇದು ಒಳ್ಳೆಯ ಪದ್ಧತಿ ಎಂದು ನನ್ನ ಅಭಿಪ್ರಾಯ. ಮಾನ್ಯ ಯಾವಗಲ್‌ರವರು ಈ ಸಭೆಗೆ ಹೊಸಬರೇನಲ್ಲ ಇವರು ಈ ಹಿಂದೆ ರಾಜ್ಯ ಮಂತ್ರಿಗಳಾಗಿದ್ದರು ಆಗ ಬಹಳ ಒಳ್ಳೆಯ ರೀತಿಯಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದರು, ಅವರು ಹೆಚ್ಚು ಮಾತನಾಡುವವರು ಅಲ್ಲ, ಬಹಳ ಮೃದು ಸ್ವಭಾವದವರು ಆದರೇ ಯಾವುದೇ ಒಂದು ಕೆಲಸವನ್ನು ಮಾಡಬೇಕೆಂದರೆ ಅದನ್ನು ಹಠ ಹಿಡಿದು ಮಾಡುತ್ತಾರೆ, ಮುಖ್ಯವಾಗಿ ಅವರ ಜಿಲ್ಲೆಯ ಮತ್ತು ಮತದಾರರ ಅಭಿವೃದ್ಧಿಯ ವಿಷಯದಲ್ಲಿ ನಿಜಕ್ಕೂ ನಾನು ಕಣ್ಣಾರೆ ನೋಡಿದ್ದೇನೆ ಮತ್ತು ಅದಕ್ಕಾಗಿ ನಾನು ಅವರನ್ನು ಮೆಚ್ಚಿಕೊಂಡಿದ್ದೇನೆ. ಅವರು ತಮ್ಮ ಸಾಮರ್ಥ್ಯ ಮತ್ತು ಸ್ವಭಾವದಿಂದ, ಮಾನ್ಯ ಅಧ್ಯಕ್ಷರೇ ನಿಮಗೇ ಬಹಳಷ್ಟು ಸಹಾಯಕರಾಗುತ್ತಾರೆ, ಮತ್ತು ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ನಿಮ್ಮಿಬ್ಬರಲ್ಲಿ ಪರಸ್ಪರ ಸಾಮರಸ್ಯವಿರುತ್ತದೆ. ನೀವು ಯಾವಗಲ್‌ರಾದರೂ ಈ ಜವಾಬ್ದಾರಿಯನ್ನು ಕಾರಣಾಂತರದಿಂದ ಅವರಿಗೆ ಬಿಟ್ಟುಕೊಡತಕ್ಕಂತಹ ಪ್ರಸಂಗ ಬಂದಾಗ ಅದನ್ನು ಅವರು ಯಾವುದೇ ರೀತಿಯ ಚ್ಯುತಿ ಬಾರದಂತೆ ಸಮರ್ಥ ರೀತಿಯಲ್ಲಿ ನಿರ್ವಹಿಸುತ್ತಾರೆಂಬ ಬರವಸೆ ನನಗಿದೆ. ನಾನು ಪುನ: ಅವರನ್ನು ಅಭಿನಂದಿಸುತ್ತೇನೆ ಮತ್ತು ಅವರ ಜವಾಬ್ದಾರಿ ನಿರ್ವಹಣೆಯಲ್ಲಿ ಸಂಪೂರ್ಣ ಯಶಸ್ಸು ಸಿಗಲೆಂದು ಹಾರೈಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಈಗತಾನೇ ಆಯ್ಕೆಯಾಗಿರತಕ ಡೆಪ್ಯೂಟಿ ಸ್ಪೀಕರ್‌ರವರಾದ ಶ್ರೀಮಾನ್ ಯಾವಗಲ್‌ರವರಿಗೆ ಇಂದು ನಮ್ಮ ಪಕ್ಷದ ಎಲ್ಲಾ ಸದಸ್ಯರ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ, ಮುಖ್ಯಮಂತ್ರಿಗಳು ಹೇಳಿದ ಹಾಗೆ ಶ್ರೀಮಾನ್ ಯಾವಗಲ್‌ರವರು ರಾಜ್ಯದ ಸಚಿವರಾಗಿ ಕೆಲಸ ಮಾಡಿರುವುದನ್ನು ನಾನು ನೋಡಿದ್ದೇನೆ, ಇವರು ಬಹಳ ಮೃದು ಹಾಗೂ ಮಿತಭಾಷಿಗಳು, ಅವರು ಒಂದು ಮಾತನ್ನು ಆಡಿದ ನಂತರ ಮತ್ತೊಂದು ಮಾತನ್ನು ಆಡುವುದಿಲ್ಲ ಇವರು ಬಹಳ ಸರಳ ಸ್ವಭಾವದವರು ಎಂದೂ ನನಗೆ ಗೊತ್ತಿದೆ. ಈ ಸ್ಥಾನಕ್ಕೆ ಬರುವವರೆಲ್ಲರಿಗೂ ಈ ಎರಡರ ಅವಶ್ಯಕತೆ ಬಹಳ ಜಾಸ್ತಿ ಇದೆ. ಒಂದು ಸಮಾಧಾನಿಯಾಗಿರುವುದು ಮತ್ತೊಂದು ಅತೀ ಕಡಿಮೆ ಮಾತನಾಡುವುದು ಈ ಎರಡನ್ನೂ ಅವರು ಹೊಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಉದಾರ ಸ್ವಭಾವದವರಾಗಿದ್ದರೆ ನಮ್ಮ ಕಡೆಯ ಒಬ್ಬ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಆರಿಸಬಹುದಾಗಿತ್ತು, ಆದರೆ ಅವರಿಗೆ ಅಷ್ಟು ದೊಡ್ಡ ಮನಸ್ಸು ಇಲ್ಲ, ಆದರೂ ಕೂಡ ನಾವೆಲ್ಲರೂ ಮಾನ್ಯ ಯಾವಗಲ್‌ರವರನ್ನು ಬೆಲಕಮಲ್ ಮಾಡುತ್ತೇವೆ. ಮತ್ತೊಮ್ಮೆ ನಾನು ಎಲ್ಲಾ ಸದಸ್ಯರುಗಳ ಪರವಾಗಿ ಅವರ ಕೆಲಸ ಸುಗಮವಾಗಲೆಂದು ಹಾರೈಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾಗಿರತಕ್ಕಂತಹ ಯಾವಗಲ್‌ರವರು ಇವತ್ತಿನದಿವಸ ಉಪಾಧ್ಯಕ್ಷರಾಗಿ ಈ ಸ್ಥಾನವನ್ನು ಅಲಂಕರಿಸಿರತಕ್ಕದ್ದು ಎಲ್ಲರಿಗೂ ಸಂತೋಷವನ್ನು ತಂದಿರತಕ್ಕ ಸಂಗತಿಯಾಗಿದೆ. ಅವರು ಸ್ವಭಾವತ: ಮೃದುವೆಂದು ಆಡಳಿತ ಪಕ್ಷದ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆಯವರು ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದರು. ಇವರುಗಳು ಈ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಮುಂಚೆಯೇ ನನಗೆ ಮಾನ್ಯ ಯಾವಗಲ್‌ರವರ ಪರಿಚಯವಾಗಿತ್ತು.

೧೦–೩೦ ಎ. ಎಂ.

ಶ್ರೀಯುತರು ೧೯೬೩ರಲ್ಲಿ ಮೊದಲ ಬಾರಿಗೆ ಶಾಸನಸಭೆಗೆ ಆರಿಸಿ ಬಂದಿದ್ದರು. ತಮಗೂ ಗೊತ್ತಿರಬಹುದು. ಅವರು ತಮ್ಮ ಜಿಲ್ಲೆಯವರು ಆಗಿದ್ದರು. ಬಹಳ ಮೃದು ಸ್ವಭಾವದಿಂದ ಎಂಬ ಕಾರಣದಿಂದ ೬೫ರಲ್ಲಿ ಶಾಸನಸಭೆಗೆ ಪುನೇಶ ಮಾಡುವ ಸಂದರ್ಭದಲ್ಲಿ ಅವರಿಗೆ ನಮ್ಮ ಬೆಂಬಲ ಇತ್ತು. ಅವರಿಗೆ ಕೂಡ ಇದು ಗೊತ್ತಿದೆ. ಅದು ರೈತರ ಆಂಧೋಲನದ ಸಂದರ್ಭ ಏನು ನಡೆಯಿತು ಹೆಚ್ಚಾಗಿ ಪ್ರಾಮುಖ್ಯತೆ ಕೊಟ್ಟು ಆಗ ಸದಸ್ಯರಾಗಿ ಆಯ್ಕೆಯಾದ ಸಂದರ್ಭ ಇತ್ತು. ರೈತರ ಬಗ್ಗೆ ಇವರಿಗೆ ಕಳಕಳಿ ಇತ್ತು, ಅವರ ಬಗ್ಗೆ ಅಂದರೆ ರೈತರ ಬಗ್ಗೆ ಹೋರಾಟ ಮಾಡಿದರು ಶ್ರೀ ಯಾವಗಲ್‌ರವರು ಈ ಒಂದು ಸ್ಥಾನಕ್ಕೆ ಭೂಷಣ ಪ್ರಾಯವಾದ ಆಯ್ಕೆ. ಮುಂಚೆ ಇದ್ದ ಶ್ರೀ ವೀರಣ್ಣನವರು ಕೂಡ ಅದೇ ಧಾಟಿಯವರು, ನೀವು ಚೆನ್ನಾಗಿಲ್ಲವೆಂದು ಅರ್ಥವಲ್ಲ ನೀವು ಅಧ್ಯಕ್ಷರು, ಬಹಳ ಸಂತೋಷ ಅದರ ಬಗ್ಗೆ ಪ್ರಶ್ನೆ ಇಲ್ಲ. ಉಪಾಧ್ಯಾಕ್ಷರ ಪೈಕಿ ನಾನು ಹೇಳುವುದು ಶ್ರೀ ಮಂಜುನಾಥ್ ಅವರು ಕೂಡ ಉಪಾಧ್ಯಕ್ಷರು ಆಗಿದ್ದವರು, ಅವರೂ ಮೃದು ಸ್ವಭಾವದವರು. ಈ ಮೃದು ಸ್ವಭಾವದ ಒಂದು ಪರಂಪರೆ ಈ ಸದನದಲ್ಲಿ ಉಪಾಧ್ಯಕ್ಷರ ಆಯ್ಕೆಯಾಗುವ ಸಂದರ್ಭದಲ್ಲಿ ಆಗುತ್ತಾ ಇದೆ. ಬಹಳ ಸಂತೋಷ. ಶ್ರೀ ವೀರಣ್ಣನವರು ಉಪಾಧ್ಯಕ್ಷರಾಗಿದ್ದಾಗ ನಿಜಕ್ಕೂ ಹೇಳಬೇಕೆಂದರೆ ಎಲ್ಲಾ ಮೂಲೆಗಳಿಂದ ಒಳ್ಳೆಯ ಹೆಸರನ್ನೂ ಗಳಿಸಿಕೊಂಡರು. ಈ ಕಡೆಯ ಸದಸ್ಯರ ಆ ಕಡೆಯ ಸದಸ್ಯರ ಮೆಚ್ಚುಗೆಯನ್ನು ಪಡೆದುಕೊಂಡಿದ್ದರು. ಶ್ರೀ ಯಾವಗಲ್ ಬಗ್ಗೆ ನನಗೆ ನಂಬಿಕೆ ಇದೆ. ಅವರ ಸಮಾಧಾನ ಒಂದು ಗುಣ, ಅದು ಮೂಲ ಗುಣವೆಂದು ಮಾನ್ಯ ವಿರೋಧ ಪಕ್ಷದ ನಾಯಕಿಯವರು ಹೇಳಿದ್ದಾರೆ. ಇವರು ಬಹಳ ಒಳ್ಳೆಯ ಹೆಸರನ್ನು ತರುತ್ತಾರೆಂದು ನನಗೆ ನಂಬಿಕೆ ಇದೆ. ಒಂದು ವಿಶೇಷ ಗುಣವನ್ನು ಹೊಂದಿರುವ ಶ್ರೀ ಯಾವಗಲ್‌ರವರು ಎಲ್ಲರ ಮೆಚ್ಚುಗೆಯನ್ನು ಗಳಿಸಿದ್ದಾರೆ. ಈಗ ತಾನೇ ವಿರೋಧ ಪಕ್ಷದ ನಾಯಕಿಯವರು ಪ್ರಸ್ತಾಪ ಮಾಡಿದ್ದಾರೆ, ಇವರ ಬಗ್ಗೆ ಇದು ಅವರ ದೊಡ್ಡ ಗುಣವನ್ನು ತೋರಿಸುತ್ತದೆ. ಇವೊತ್ತು ಆಡಳಿತ ಪಕ್ಷದವರಿಗೆ ಉದ್ಧಾರ ಮನೋಭಾವ ಬಂದಿರಬೇಕಿತ್ತು ಆದರೆ ಬಂದಿಲ್ಲ. ಹಿಂದಿನಿಂದ ಈ ಪರಂಪರೆ ಉದ್ಭವ ಆಗಿದೆ. ಏನೇ ಇರಲಿ. ನಮ್ಮ ವಿರೋಧ ಪಕ್ಷದ ವತಿಯಿಂದ ಯಾವುದೇ ವಿರೋಧ ಧ್ವನಿ ಇರಬಾರದೆಂದು ಒಮ್ಮತದಿಂದ ಆಗಬೇಕೆಂದು ನಾವು ಸರ್ವಾನು ಮತದಿಂದ ಆಯ್ಕೆ ಆಗಬೇಕು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಿದೆವು. ಆದಕ್ಕೋಸ್ಕರ ನಮ್ಮ ಪಕ್ಷದ ವತಿಯಿಂದ ಯಾವುದೇ ರೀತಿಯ ಒಂದು ಸೂಚನೆಯನ್ನು ಕೊಡಬಾರದೆಂದು ನಾವು ವಿಚಾರ ಮಾಡಿದೆವು. ನಮ್ಮ ಈ ವಿಚಾರ ಧಾರೆಯನ್ನು ಆಡಳಿತ ಪಕ್ಷದವರು ಮೆಚ್ಚುತ್ತಾರೆಂದು ನಂಬಿಕೆ ನನಗೆ ಇದೆ. ಶ್ರೀ ಯಾವಗಲ್‌ರವರು ಅವಿರೋಧವಾಗಿ ಆಯ್ಕೆ ಆಗಬೇಕೆಂಬ ಉದ್ದೇಶದಿಂದ ವಿರೋಧ ಪಕ್ಷದ ನಾವಾಗಲೀ, ಪಿ. ಪಿ. ಐ. ಆಗಲೀ ಅಥವಾ ಸಿ. ಪಿ. ಎಂ, ಬಿ. ಜೆ. ಪಿ. ಯಾವುದೇ ಪಕ್ಷದಿಂದ ಒಂದು ಸೂಚನೆಯನ್ನು ಕಳಿಸಲಿಲ್ಲ. ಶ್ರೀ ಯಾವಗಲ್‌ರವರು ಖಚಿತವಾಗಿ ಆಯ್ಕೆ ಆಗುತ್ತಾರೆ ಎನ್ನುವ ನಂಬಿಕೆ ಇತ್ತು. ಆಯ್ಕೆಯಾದ ಅವರಿಗೆ ನಮ್ಮ ಶುಭ ಹಾರೈಕೆ ಕೂಡ ಮಾಡುತ್ತೇವೆ ಈ ಸಂದರ್ಭದಲ್ಲಿ ಶ್ರೀಮಾನ್ ಧರ್ಮಪ್ಪನವರ ಹೆಸರನ್ನು ಸೂಚನೆ ಮಾಡಿದ ಶ್ರೀ ಸಾಲೀರ್ ಸಿದ್ದಪ್ಪನವರು ಶ್ರೀ ಎಸ್. ಖೇಡ್‌ರವರು, ಶ್ರೀ ಮುನಿಸ್ವಾಮಪ್ಪನವರು ಹಾಗೂ ಶ್ರೀ ಎಂ. ವರದೇಗೌಡರು ಯಾವ ರೀತಿ ಈ ಸೂಚನೆಯನ್ನು ಮಾಡಿದ್ದಾರೆ ಅವರುಗಳ ಧೈರ್ಯವನ್ನು ನಾನು ಮೆಚ್ಚಿಕೊಂಡಿದ್ದೇನೆ.

† ಈ ಚಿಹ್ನೆ ಸಂಭಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಡಿ. ಟಿ. ಜಯಕುಮಾರ್.--ಹುಲಿ ಹಿಂಡುವ ಕೆಲಸ ಬೇಕಾಗಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ --ಮಾನ್ಯ ಬಂಗಾರಪ್ಪನವರು ಶ್ರೀ ವೀರಣ್ಣನವರು ಒಳ್ಳೆಯವರು, ಶ್ರೀ ಯಾವಗಲ್‌ರವರು ಒಳ್ಳೆಯವರು ಎಂದು ಹೇಳುತ್ತಾ ಎಷ್ಟೊಂದು ರಾಜಕೀಯ ದಾರವನ್ನು ಎಳೆಯಲು ಪ್ರಯತ್ನ ಮಾಡಿದ್ದಾರೆ. ಶ್ರೀ ಯಾವಗಲ್‌ರವರ ಅಭಿನಂದನೆಯನ್ನು ಮಾಡುವಾಗ ಸಹ ರಾಜಕೀಯ ದಾರ ಎಳೆಯುವುದಕ್ಕೆ ಪ್ರಯತ್ನ ಮಾಡಿದರು.

ಶ್ರೀ ಎಸ್. ಬಂಗಾರಪ್ಪ.--ನಾನು ಮಾನ್ಯ ಮಂಜುನಾಥ್ ಅವರ ಹೆಸರನ್ನು ಸಹ ಪ್ರಸ್ತಾಪ ಮಾಡಿದೆ, ಆದರೆ ಅವರು ರಿಜಿಸ್ಟರ್‌ನಲ್ಲಿ ಇರಲಿಲ್ಲ. ರಿಜಿಸ್ಟರ್‌ನಲ್ಲಿ ಮಾನ್ಯ ವೀರಣ್ಣನವರು ಮತ್ತು ಮಾನ್ಯ ಯಾವಗಲ್ ಅವರು ಕಾಂಪ್ರಿರಂಗದ ಮೂಲಕ ಆರಿಸಿ ಬಂದಿದ್ದು. ಇದನ್ನು ಮಾನ್ಯ ಸಿಂಧ್ಯಾ ಅವರ ಗಮನಕ್ಕೆ ತರುತ್ತಿದ್ದೇನೆ. ಅದು ಏನೇ ಇರಲಿ, ಇವರ ಒಂದು ಆಯ್ಕೆ ನಾವೆಲ್ಲರೂ ಸಂತೋಷ ಪಡುವಂತಹ ವಿಚಾರವಾಗಿದೆ. ಇದರ ಜೊತೆಗೆ ಉಪಾಧ್ಯಕ್ಷರ ಆಯ್ಕೆ ಸಂಬಂಧದಲ್ಲಿ ಆಡಳಿತ ಪಕ್ಷದಲ್ಲಿ ನಡೆದಂಥ ವಿಚಾರ ಕೂಡ ಸಂತೋಷ ಪಡುವ ವಿಚಾರವಾಗಿದೆ.

ಶ್ರೀ ಸಿ. ಬೈರೇಗೌಡ --ನಮ್ಮ ಕಡೆಯಿಂದ ಬೇರೆ ಸೂಚನೆಗಳು ಏತಕ್ಕೆ ಬಂದವು ಎಂದರೆ, ಆ ಕಡೆಯಿಂದ ಮಾನ್ಯ ಬಂಗಾರಪ್ಪನವರು ಸಹ ಈ ಬಗ್ಗೆ ಸೂಚನೆ ಕಳುಹಿಸಿಕೊಡುತ್ತಾರೆಂದು ನಮಗೆ ತಿಳಿದು ಬಂದ ಕಾರಣದಿಂದ ನಾವು ಸಹ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದು.

ಶ್ರೀ ರಾಮಕೃಷ್ಣ ಹೆಗಡೆ.--ನಮ್ಮ ಕಡೆಯಿಂದ ಕೆಲವರು ಈ ಬಗ್ಗೆ ಸೂಚನೆಗಳನ್ನು ಕಳುಹಿಸಿ ಕೊಟ್ಟವರ ಧೈರ್ಯದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು, ಆದರೆ ಅಧಿಕೃತ ಸೂಚನೆ ವಿರುದ್ಧ ಯಾರೂ ಸಹ ಸೂಚನೆಗಳನ್ನು ತಂದಿಲ್ಲ. ಈ ಬಗ್ಗೆ ನಮ್ಮ ಕಡೆಯ ಸದಸ್ಯರ ಧೈರ್ಯ ಮಾನ್ಯ ಜಾಫರ್‌ಷರೀಫ್ ಅವರ ಧೈರ್ಯಕ್ಕಿಂತ ಹೆಚ್ಚಾಗಿದೆ.

ಶ್ರೀ ಎಸ್. ಬಂಗಾರಪ್ಪ.--ನಿಮ್ಮವರು ಈ ಸದನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹೆಸರುಗಳು ಬರುವಂತೆ ಮಾಡಿದರು. ಆದರೆ ಮಾನ್ಯ ಜಾಫರ್‌ಷರೀಫ್ ಅವರು ಆಗಲೀ ಅಥವಾ ಬೇರೆಯವರಾಗಲೀ ಪಾರ್ಲಿಮೆಂಟ್‌ನ ಕಾರ್ಯಕಲಾಪದ ಪಟ್ಟಿಯಲ್ಲಿ ಈ ರೀತಿ ಹೆಸರುಗಳನ್ನು ತಂದಿಲ್ಲ.

ಶ್ರೀ ಪಂಪಾವತಿ.--ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸದನದ ಉಪಾಧ್ಯಕ್ಷರಾಗಿ ಸರ್ವಾನು ಮತದಿಂದ ಆಯ್ಕೆಯಾಗಿರುವಂತಹ ಸನ್ಮಾನ್ಯ ಯಾವಗಲ್ ಅವರಿಗೆ ನಮ್ಮ ಪಕ್ಷದ ಪರವಾಗಿ ಅಭಿನಂದನೆ ಗಳನ್ನು ಸಲ್ಲಿಸುತ್ತೇನೆ. ಮಾನ್ಯ ಯಾವಗಲ್ ಅವರು ತುಂಬಾ ಮೃದು ಸ್ವಭಾವದವರಾಗಿದ್ದಾರೆ ಹಾಗೂ ನೀತಿ ನಿಯಮ ಹಾಗೂ ತತ್ವಗಳ ಆಧಾರದ ಮೇಲೆ ಕೆಲಸ ಮಾಡುವವರಾಗಿದ್ದಾರೆ. ಈ ಹಿಂದೆ ಮಾನ್ಯ ದೇವರಾಜ ಅರಸ್ ಅವರು ರೂಪಿಸಿದಂಥ ರೈತ ಚಳುವಳಿಯಲ್ಲಿ ಇವರು ಪ್ರಮುಖಪಾತ್ರ ವಹಿಸಿದ್ದರು. ಈ ಹಿಂದಿನ ಸರ್ಕಾರ ರೈತರ ಮೇಲೆ ಗುಂಡು ಹಾರಿಸಿದಾಗ, ಅದನ್ನು ಪ್ರತಿಭಟಿಸಿ ರೈತರು ನರಗುಂದದಿಂದ ಬೆಂಗಳೂರಿಗೆ ನಡೆದುಕೊಂಡು ಜಾಥಾ ಬಂದಾಗ ಅದರಲ್ಲಿ ಇವರು ಮುಖ್ಯವಾದ ಪಾತ್ರವನ್ನು ವಹಿಸಿದ್ದರು. ಒಟ್ಟಿನಲ್ಲಿ ಇವರು ನಿಜಕ್ಕೂ ರೈತರ ಮುಖಂಡರಾಗಿದ್ದಾರೆ. ಇವರು ರೈತರ ಸಮಸ್ಯೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ. ರೈತರ ಬಗ್ಗೆ ಯೋಚನೆ ಮಾಡತಕ್ಕಂಥವರು ಮತ್ತು ರೈತರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯತಕ್ಕವರು ಇವೊತ್ತಿನ ದಿವಸ ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಇವರನ್ನು ಒಮ್ಮತದಿಂದ ಚುನಾಯಿಸಿರುವುದು ನಮಗೆ ಸಂತೋಷ ಸರೋಷ ಆಗಿದೆ. ಈ ಕಾರಣದಿಂದ ನನ್ನ ಪಕ್ಷದ ಪರವಾಗಿ ಅವರಿಗೆ ಸಂಪೂರ್ಣವಾದಂಥ ಶುಭವನ್ನು ಕೋರುತ್ತೇನೆ. ಅವರ ಕಾರ್ಯಗಳಿಗೆ ನಾವು ಯಾವಾಗಲೂ ಸಹಕಾರವನ್ನು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮೆಲ್ಲರಿಗೂ ಆಗಿರುವಂಥ ತುಂಬಾ ಸಂತೋಷದ ಸಂಗತಿ ಎಂದರೆ, ತುಂಬಾ ಅನುಭವವುಳ್ಳವರು ಮತ್ತು ಪ್ರಾಮಾಣಿಕರು ಆದಂಥ ಶ್ರೀ ಯಾವಗಲ್ ಅವರು ಉಪಾಧ್ಯಕ್ಷರ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆ ಆಗಿರುವುದು. ಈ ಸದನದಲ್ಲಿ ಒಳ್ಳೆಯ ಅನುಭವಿಗಳನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಆರಿಸುವುದು ಒಂದು ಪಾಡಿಕೆ ಆಗಿದೆ. ಆದರ ಪ್ರಕಾರ ಇವರ ಆಯ್ಕೆ ತುಂಬಾ ಸಂತೋಷದ ಸಂಗತಿ ಆಗಿದ. ಇವರು ತಮ್ಮ ಒಂದು ನಾಯಕತ್ವದಲ್ಲಿ ಹೆಚ್ಚು ಸಹಕಾರ ಕೊಟ್ಟು ಒಳ್ಳೆಯ ಕೆಲಸ ಮಾಡುತ್ತಾರೆಂಬ ವಿಶ್ವಾಸ ನಮಗಿದೆ. ಈ

ಕಾರಣದಿಂದ ನಾನು ನಮ್ಮ ಬಿ. ಜೆ. ಪಿ. ಪರವಾಗಿ ಮಾನ್ಯ ಯಾವಗಲ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).--ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧಪಕ್ಷದ ನಾಯಕಿಯವರೇ, ಈ ಸಭೆಯಲ್ಲಿರುವಂತಹ ಹಿರಿಯ ಸದಸ್ಯರೇ, ವಿರೋಧ ಪಕ್ಷಗಳ ಸ್ನೇಹಿತರೇ ಹಾಗೂ ನನ್ನ ಆತ್ಮೀಯ ಮಿತ್ರರೇ, ತಾವು ಈ ದಿನ ನನ್ನನ್ನು ಈ ಸ್ಥಾನಕ್ಕೆ ಆರಿಸಿ ಒಂದು ಜವಾಬ್ದಾರಿಯನ್ನು ಹೊರಿಸಿದ್ದೀರಿ. ನನ್ನನ್ನು ಈ ಸ್ಥಾನಕ್ಕೆ ಅವಿರೋಧದಿಂದ ಆರಿಸಿದ ತಮ್ಮೆಲ್ಲರ ಗೌರವಕ್ಕೆ ಮತ್ತು ವಿಶ್ವಾಸಕ್ಕೆ ನಾನು ಋಣಿ ಆಗಿದ್ದೇನೆ. ತಾವುಗಳು ನನ್ನನ್ನು ಯಾವ ಒಂದು ವಿಶ್ವಾಸ ಮತ್ತು ನಂಬಿಕೆಯಿಂದ ಈ ಸ್ಥಾನಕ್ಕೆ ಆರಿಸಿದಿರೋ ಅದಕ್ಕೆ ಅನುಗುಣವಾಗಿ ಮತ್ತು ಅವನ್ನು ಪೂರೈಸುವುದಕ್ಕೆ ನಾನು ಎಲ್ಲ ರೀತಿಯಿಂದಲೂ ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ತಮ್ಮ ಹಿರಿತನದಲ್ಲಿ, ತಮ್ಮ ಧುರೀಣತ್ವದಲ್ಲಿ ಈ ಸದನದ ಕಲಾಪಗಳು ನಡೆಯಲಿಕ್ಕೆ ನನ್ನಿಂದ ಆಗಬಹುದಾದ ಯಾವುದೇ ಪಾತ್ರಕ್ಕೂ, ಪೂರಕವಾದ ಪಾತ್ರಕ್ಕೂ ತಾವು ನನ್ನನ್ನು ಆಣಿಗೊಳಿಸಿಕೊಳ್ಳುತ್ತೀರಿ ಎಂದು ಹೇಳಿ, ನನ್ನನ್ನು ಆಯ್ಕೆಮಾಡಿ ಒಳ್ಳೆಯ ಮಾತುಗಳನ್ನು ಆಡಿದಂಥ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿ ಈ ಒಂದು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಭಾನಾಯಕರೆ, ಮಾನ್ಯ ವಿರೋಧ ಪಕ್ಷದ ನಾಯಕರೆ, ಯಾವತ್ತೂ ನನ್ನ ಆತ್ಮೀಯ ಸದಸ್ಯ ಸ್ನೇಹಿತರೆ, ಈ ದಿವಸ ತಾವೆಲ್ಲರೂ ಸತ್ಸಂಪ್ರದಾಯದಂತೆ ಮಾನ್ಯ ಯಾವಗಲ್‌ರವರನ್ನು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಮಾಡಿದ್ದೀರಿ, ಬಹಳ ಸಂತೋಷ. ಮಾನ್ಯ ಯಾವಗಲ್‌ರವರು ರೈತರ ಮಂಡಾಳು, ರೈತರ ಅಭಿವೃದ್ಧಿಗಾಗಿ ಹೋರಾಟ ಮಾಡಿದಂಥ ವ್ಯಕ್ತಿಗಳಂ. ಈ ಸದನದಲ್ಲೂ ಕೂಡ ಒಬ್ಬ ಅತ್ಯುತ್ತಮ ಶಾಸಕರಾಗಿ ಕೆಲಸ ಮಾಡಿದ್ದಾರೆ. ನನಗೂ ಕೂಡ ಅವರು ಉಪಾಧ್ಯಕ್ಷರಾಗಿ ಆರಿಸಿ ಬಂದಿರುವುದರಿಂದ ನನಗೂ ವಿಶ್ರಾಂತಿಗೆ ಅನುಕೂಲವಾಯಿತಂ ಎಂದು ನನಗೆ ಸ್ವಲ್ಪ ಆನಂದವಾಗಿದೆ. ಶಾಂತ ಸಮುದ್ರು ಹೇಗೆ ಇರುತ್ತದೋ ಹಾಗೆ ನಾವೂ ಕೂಡ ಸಭಾಧ್ಯಕ್ಷರು ಉಪಾಧ್ಯಕ್ಷರು ಇರಬೇಕಾಗುತ್ತದೆ. ಆ ದೃಷ್ಟಿಯಿಂದ ಇರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಯಾವ ಒಂದು ಪ್ರಸಂಗದಲ್ಲಿ ಶಾಂತ ಸಮುದ್ರ ಇದ್ದರೂ ಕೂಡ ಬಿರುಗಾಳಿ ಬಂದಾಗ ಸಮುದ್ರ ಅಲ್ಲೋಲಕಲ್ಲೋಲವಾಗುತ್ತದೆ. ಒಮ್ಮೊಮ್ಮೆ ದೊಡ್ಡ ಮರ ಇದ್ದಾಗಲೂ ಕೂಡ ಸುಂಟರಗಾಳಿ ಬಂದರೆ ಅಲ್ಲೋಲಕಲ್ಲೋಲವಾಗುತ್ತದೆ. ಹಾಗೆಯೇ ಈ ಒಂದು ಉಚ್ಚ ಸತ್ಸಂಪ್ರದಾಯಗಳನ್ನು ಹೊಂದಿದಂಥ ಸದನದಲ್ಲಿ ನಾವಿಬ್ಬರೂ ಸದನವನ್ನು ನಡೆಸುವಾಗ ಶಾಂತ ಸಮುದ್ರದಹಾಗೆ ಅವಕಾಶಮಾಡಿಕೊಟ್ಟು, ಯಾವರೀತಿಯ ಸುಂಟರಗಾಳಿ, ಬಿರುಗಾಳಿ ಬರದಂತೆ ಅವಕಾಶ ಮಾಡಿಕೊಡುತ್ತೀರಿ ಎಂದು ಹೇಳಿ, ಮತ್ತೊಮ್ಮೆ ನಿಮ್ಮೆಲ್ಲರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್, ಜೈ ಕರ್ನಾಟಕ.

ಗಮನ ಸೆಳೆಯುವ ಸೂಚನೆ

ಶೋರಾಪುರ ತಾಲ್ಲೂಕು, ಚೋನಾಳ ಕೆರೆ ಅಂಗಳ ಜಮೀನು ಮುಳುಗಡೆಯಾಗಿರುವ ರೈತರುಗಳಿಗೆ ಪರಿಹಾರ ನೀಡುವ ಬಗ್ಗೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್.--ಮಾನ್ಯ ಅಧ್ಯಕ್ಷರೆ, ಶೋರಾಪುರ ತಾಲ್ಲೂಕು ಪೇಠ್ ಅಮ್ಮಾಪೂರ ಸರ್ವೆ ನಂ. ೨೩-೧ ರಲ್ಲಿನ ಬೋನಾಳ ಕೆರೆಯ ಕೆಳಗಡೆ ಬರತಕ್ಕ ೬೭೬ ಎಕರೆ ಜಮೀನಿನ ಪೈಕಿ ಮುಳುಗಡೆಯಾಗಿರುವ ೩೫೦ ಎಕರೆ ಜಮೀನಿನ ಬಗ್ಗೆ ೧೯೬೬-೬೭ ರಿಂದಲೂ ಪರಿಹಾರ ನೀಡುವ ಹಾಗೂ ಮುಳುಗಡೆ ಜಮೀನನ್ನು ಬಿಡುಗಡೆ ಮಾಡಿಸುವ ಬಗ್ಗೆ ಸರ್ಕಾರವನ್ನು ಒತ್ತಾಯಿಸುತ್ತಿದ್ದು ಸಂಬಂಧಪಟ್ಟ ರೈತರಿಗೆ ಯಾವ ಪರಿಹಾರವೂ ದೊರೆಯದಿದ್ದುದರಿಂದ ರೈತರು ೩೧-೮-೧೯೮೭ ರಿಂದ ಸರದಿ ಉಪವಾಸ ಸತ್ಯಾಗ್ರಹ ಕೈಕೊಂಡಿರುವುದರಿಂದ ಅದರಿಂದಾಗತಕ್ಕ ಅಹಿತಕರ ಘಟನೆಯನ್ನು ತಪ್ಪಿಸಲು ಸರಕಾರ ಕೂಡಲೇ ಕ್ರಮ ಕೈಕೊಂಡು ರೈತರಿಗೆ ದೊರೆಯಬೇಕಾದ ಪರಿಹಾರ ಹಾಗೂ ಇತರ ಕೋರಿಕೆಗಳನ್ನು ಈಡೇರಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.